ದಿನಾಂಕ:12.09.2014ನೇ ಶುಕ್ರವಾರ ಅಪರಾಹ್ನ 4.00ಗಂಟೆಗೆ ಪ್ರಾಧಿಕಾರದ ಅಧ್ಯಕ್ಷರಾದ ಉಪವಿಭಾಗಾಧಿಕಾರಿಗಳು, ಮಡಿಕೇರಿ ಉಪ–ವಿಭಾಗ ಹಾಗೂ ಅಪರ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರ ಅಧ್ಯಕ್ಷತೆಯಲ್ಲಿ ಕಚೇರಿ ಸಭಾಂಗಣದಲ್ಲಿ ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ಪರಿಷ್ಕೃತ–1–2021 (ಅಂತಿಮ)ಕ್ಕೆ ಸಭಾ ಅನುಮೋದನೆ ಪಡೆಯುವ ಬಗ್ಗೆ ನಡೆದ ಸಭಾ ನಡಾವಳಿ.

| ಕ್ರ. ಸ | ಹಾಜರಿದ್ದ ಸದಸ್ಯರು | ಕ್ರ. ಸ | ಗೈರು ಹಾಜರಿದ್ದ ಸದಸ್ಯರು |
|---|---|---|---|
| 1. | ಉಪವಿಭಾಗಾಧಿಕಾರಿಗಳು, ಅಧ್ಯಕ್ಷರು<br>ಮಡಿಕೇರಿ ಉಪ ವಿಭಾಗ, ಮತ್ತು<br>ಅಪರ ಜಿಲ್ಲಾಧಿಕಾರಿಗಳು(ಪ್ರ),<br>ಕೊಡಗು ಜಿಲ್ಲೆ, ಮಡಿಕೇರಿ. | 1. | ಮಾನ್ಯ ಜಿಲ್ಲಾಧಿಕಾರಿಗಳು, ಸದಸ್ಯರು<br>ಕೊಡಗು ಜಿಲ್ಲೆ,<br>ಮಡಿಕೇರಿ. |
| 2. | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಸದಸ್ಯರು<br>ಕಲ್ಯಾಣಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ. | 2. | ಮಾನ್ಯ ಶ್ರೀ ಕೆ.ಜಿ.ಬೋಪಯ್ಯರವರು, ಸದಸ್ಯರು<br>ವಿಧಾನಸಭಾ ಸದಸ್ಯರು, ವಿರಾಜಪೇಟೆ ಕ್ಷೇತ್ರ. |
| 3. | ಕಾರ್ಯಪಾಲಕ ಅಭಿಯಂತರರು ಸದಸ್ಯರು<br>ಚೆಸ್ಕಾಂ, ಮಡಿಕೇರಿ. | 3. | ಮಾನ್ಯ ಶ್ರೀ ಅಪ್ಪಚ್ಚುರಂಜನ್‌ರವರು, ಸದಸ್ಯರು<br>ವಿಧಾನ ಸಭಾ ಸದಸ್ಯರು, ಮಡಿಕೇರಿ ಕ್ಷೇತ್ರ. |
| 4 | ಪೌರಾಯುಕ್ತರು, ಸದಸ್ಯರು<br>ನಗರಸಭೆ, ಮಡಿಕೇರಿ. | 4 | ಮಾನ್ಯ ಶ್ರೀ ಟಿ.ಜಾನ್‌ರವರು, ಸದಸ್ಯರು<br>ವಿಧಾನ ಪರಿಷತ್ ಸದಸ್ಯರು, ಮಡಿಕೇರಿ. |
| 5 | ಸಹಾಯಕ ನಿರ್ದೇಶಕರು, ನಗರ ಯೋಜನಾ ಸದಸ್ಯರು<br>ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ,<br>ಮಡಿಕೇರಿ. | 5 | ಮಾನ್ಯ ಆರಕ್ಷಕ ಅಧೀಕ್ಷಕರು, ಸದಸ್ಯರು<br>ಕೊಡಗು ಜಿಲ್ಲೆ, ಮಡಿಕೇರಿ. |
| 6 | ಕಾರ್ಯಪಾಲಕ ಅಭಿಯಂತರರು, ಸದಸ್ಯರು<br>ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ,<br>ಮೈಸೂರು | 6 | ಕಾರ್ಯಪಾಲಕ ಅಭಿಯಂತರರು ಸದಸ್ಯರು<br>ಲೋಕೋಪಯೋಗಿ ಇಲಾಖೆ, ಮಡಿಕೇರಿ. |
| 7 | ವಿಭಾಗೀಯ ನಿಯಂತ್ರಕರು, ಆಹ್ವಾನಿತರು<br>ಕೆ.ಎಸ್.ಆರ್.ಟಿ.ಸಿ. ಪುತ್ತೂರು ವಿಭಾಗ, ಪುತ್ತೂರು | 6 | ಕಾರ್ಯಪಾಲಕ ಅಭಿಯಂತರರು ಆಹ್ವಾನಿತರು<br>ಕರ್ನಾಟಕ ಗೃಹ ಮಂಡಳಿ, ಮೈಸೂರು. |
| 8 | ಜಿಲ್ಲಾ ವಾರ್ತಾ ಮತ್ತು ವಿಶೇಷ ಆಹ್ವಾನಿತರು<br>ಪ್ರಚಾರಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ. | 7 | ಜಂಟಿ ನಿರ್ದೇಶಕರು, ಆಹ್ವಾನಿತರು<br>ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಡಗು ಜಿಲ್ಲೆ, ಮಡಿಕೇರಿ. |
| 9 | ಶ್ರೀ ಅಶೋಕ್ ಕುಮಾರ್ ಪ್ರಭಾರ ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ,<br>ಮಡಿಕೇರಿ. | 8 | ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಆಹ್ವಾನಿತರು<br>ಮಡಿಕೇರಿ ಉಪ ವಿಭಾಗ, ಮಡಿಕೇರಿ. |

ಸಭೆಯಲ್ಲಿ ಹಾಜರಿದ್ದ ಪ್ರಾಧಿಕಾರದ ಅಧ್ಯಕ್ಷರು, ಸದಸ್ಯರುಗಳು, ಆಹ್ವಾನಿತರುಗಳು ಮತ್ತು ವಿಶೇಷ ಆಹ್ವಾನಿತರುಗಳನ್ನು ಪ್ರಾಧಿಕಾರದ ಆಯುಕ್ತರು ಸ್ವಾಗತಿಸುತ್ತಾ ಸಭಾ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

–2–

**<u>ವಿಷಯ:–1</u> ಕೊಡಗು ಜಿಲ್ಲೆ, ಮಡಿಕೇರಿ ನಗರದ ಪ್ರಾಧಿಕಾರದ ವ್ಯಾಪ್ತಿಯ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ (ಪರಿಷ್ಕೃತ–1)–2021ಕ್ಕೆ ಸರ್ಕಾರದ ನಡಾವಳಿ ಆದೇಶ ಸಂಖ್ಯೆ: ನಅಇ/125/ಮೈಅಪ್ರಾ/2013, ಬೆಂಗಳೂರು, ದಿನಾಂಕ: 21.08.2014 ರಂದು ಸರ್ಕಾರವು ಅಂತಿಮ ಅನುಮೋದನೆ ನೀಡಿರುತ್ತದೆ. ಸದರಿ ಮಹಾಯೋಜನೆಯ ನಕ್ಷೆ ಮತ್ತು ವರದಿಗಳನ್ನು ಅನುಷ್ಠಾನಕ್ಕೆ ತರಲು ಸಭೆಯ ಅವಗಾಹನೆಗೆ ಮಂಡಿಲಾಗಿದೆ.**

**<u>ಟಿಪ್ಪಣಿ:–</u>** ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರವು ಕರ್ಣಂಗೇರಿ, ಕೆ.ಬಾಡಗ, ಕೆ.ನಿಡುಗಣೆ, ಹೆಬ್ಬೆಟ್ಟಗೇರಿ, ಮಕ್ಕಂದೂರು, ಇಬ್ನಿವಳವಾಡಿ, ಕಡಗದಾಳು, ಕಾಟಕೇರಿ ಮತ್ತು ಮೇಕೇರಿ (ಮಡಿಕೇರಿ ನಗರವನ್ನು ಒಳಗೊಂಡು) 9 ಗ್ರಾಮಗಳ ಸ್ಥಳೀಯ ಯೋಜನಾ ಪ್ರದೇಶಗಳನ್ನೊಳಗೊಂಡಿರುತ್ತದೆ.

ಮಡಿಕೇರಿ ನಗರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಪ್ರಾಧಿಕಾರವು ನಕ್ಷೆ ಮತ್ತು ವರದಿಗಳನ್ನು ಸಿದ್ದಪಡಿಸಿ, ಸರ್ಕಾರಕ್ಕೆ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿದಂತೆ, ಸರ್ಕಾರದ ನಡಾವಳಿ ಆದೇಶ ಸಂಖ್ಯೆ ನಅಇ/265/ಮೈಅಪ್ರಾ/2011,ಬೆಂಗಳೂರು, ದಿನಾಂಕ:06.09.2012ರಂದು ಸ್ಥಳೀಯ ಯೋಜನಾ ಪ್ರದೇಶ ಪರಿಷ್ಕೃತ–1ಕ್ಕೆ ಸರ್ಕಾರವು ತಾತ್ಕಾಲಿಕ ಅನುಮೋದನೆಯನ್ನು ನೀಡಿರುತ್ತದೆ. ತದನಂತರದಲ್ಲಿ ಕೆ.ಟಿ.ಸಿ.ಪಿ ಕಾಯ್ದೆ 1961ರನ್ವಯ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆ ಸೂಚನೆಗಳನ್ನು ಆಹ್ವಾನಿಸಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಸಭಾ ನಿರ್ಣಯದೊಂದಿಗೆ ಸ್ಥಳೀಯ ಯೋಜನಾ ಪ್ರದೇಶ ಪರಿಷ್ಕೃತ–1 (ಅಂತಿಮ)ಕ್ಕೆ ಅನುಮೋದನೆ ಪಡೆದುಕೊಳ್ಳಲು ನಕ್ಷೆ ಮತ್ತು ವರದಿಗಳನ್ನು ಸಿದ್ದಪಡಿಸಿ, ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಪ್ರಾಧಿಕಾರದಿಂದ ಸಲ್ಲಿಸಲಾಗಿತ್ತು. ಸದರಿ ಮಹಾಯೋಜನೆಗೆ ಸರ್ಕಾರದ ನಡಾವಳಿ ಆದೇಶ ಸಂಖ್ಯೆ:ನಅಇ/125/ಮೈಅಪ್ರಾ/2013, ಬೆಂಗಳೂರು, ದಿನಾಂಕ:21.08.2014ರಂದು ಸರ್ಕಾರವು ಅಂತಿಮ ಅನುಮೋದನೆ ನೀಡಿರುತ್ತದೆ. ಸರ್ಕಾರದಿಂದ ಸ್ವೀಕರಿಸಿರುವ ಮಡಿಕೇರಿ ಸ್ಥಳೀಯ ಯೋಜನಾ ಪ್ರದೇಶದ ನಕ್ಷೆ ಮತ್ತು ವರದಿಗಳನ್ನು ಸಾರ್ವಜನಿಕರ ತಿಳುವಳಿಕೆಗಾಗಿ ದಿನಾಂಕ:05.09.2014ರ ಶಕ್ತಿ ಮತ್ತು ವಿಜಯವಾಣಿ ದಿನಪತ್ರಿಕೆಯಲ್ಲಿ ಪ್ರಕಟಿಸಿ, ಪ್ರಚುರ ಪಡಿಸಲಾಗಿರುತ್ತದೆ ಹಾಗೂ ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಲಾಗಿದೆ.

**<u>ನಿರ್ಣಯ:–</u>** ಸರ್ಕಾರದಿಂದ ಅಂತಿಮ ಅನುಮೋದನೆಯಾಗಿರುವ ಮಡಿಕೇರಿ ನಗರದ ಸ್ಥಳೀಯ ಯೋಜನಾ ಪ್ರದೇಶ (ಪರಿಷ್ಕೃತ–1)–2021ರ ನಕ್ಷೆ ಮತ್ತು ವರದಿಯಲ್ಲಿರುವ ಮಾಹಿತಿಗಳನ್ನು ಸಭೆಯಲ್ಲಿ ಆಯುಕ್ತರು ಕೂಲಂಕುಷವಾಗಿ ವಿವರಿಸಿದರು. ಈ ಬಗ್ಗೆ ಸಭೆಯು ವರದಿ ಮತ್ತು ನಕ್ಷೆಗಳನ್ನು ಪರಿಶೀಲಿಸಿ, ಚಾಲ್ತಿಯಲ್ಲಿರುವ ಮಹಾಯೋಜನೆ (ವ್ಯಾಪಾಕಾಭಿವೃದ್ಧಿ ಯೋಜನೆ) 1997ರ ಬದಲಿಗೆ ಸರ್ಕಾರವು ಹಾಲಿ ಅಂತಿಮ ಅನುಮೋದನೆ ನೀಡಿರುವ ಪರಿಷ್ಕೃತ–1(ಅಂತಿಮ)–2021 ಅನ್ನು ಸರ್ಕಾರದಿಂದ ಅನುಮೋದನೆಯಾಗಿರುವ ದಿನಾಂಕ:21.08.2014ರಿಂದಲೇ ಜಾರಿಗೆ ತರಲು ಆಯುಕ್ತರಿಗೆ ಅಧಿಕಾರ ನೀಡಿ ಸರ್ವಾನುಮತದ ಅಂಗೀಕಾರ ನೀಡಿತು.

**<u>2. ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು.</u>**

**1. <u>ನಾಡ ಹಬ್ಬವಾದ ಮಡಿಕೇರಿ ದಸರಾ ಹಬ್ಬಕ್ಕೆ ಪ್ರಾಧಿಕಾರದ ವತಿಯಿಂದ ವಂತಿಕೆ ನೀಡುವ ಬಗ್ಗೆ.</u>**

**<u>ನಿರ್ಣಯ:–</u>** ಮಡಿಕೇರಿ ನಾಡಹಬ್ಬವನ್ನು ವಿಜೃಂಭಣೆಯಿಂದ ಆಚರಿಸುವ ಸಂಬಂಧ ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ರೂ.1.00ಲಕ್ಷ ಹಣವನ್ನು ವಂತಿಕೆಯಾಗಿ ಅಧ್ಯಕ್ಷರು, ದಸರಾ ಸಮಿತಿ, ಮಡಿಕೇರಿರವರಿಗೆ ನೀಡಲು ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಉಪವಿಭಾಗಾಧಿಕಾರಿಗಳು ಹಾಗೂ ಅಪರ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿರವರು ಸಭೆಯಲ್ಲಿ ಆಯುಕ್ತರಿಗೆ ತಿಳಿಸಿದರು. ಇದಕ್ಕೆ ಆಯುಕ್ತರು ಪ್ರತಿಕ್ರಿಯಿಸುತ್ತಾ, ಸರ್ಕಾರದ ಪತ್ರ ಸಂಖ್ಯೆ: ನಅಇ/09/ಮೈಅಪ್ರಾ/2005, ದಿನಾಂಕ:12.04.2005ರ ಸುತ್ತೋಲೆಯನ್ವಯ ರಾಷ್ಟೀಯ ಹಬ್ಬಗಳಿಗಾಗಿ ಮತ್ತು ಕನ್ನಡ ರಾಜ್ಯೋತ್ಸವ ಆಚರಣೆಗಾಗಿ ಗರಿಷ್ಟ ರೂ.5,000/– ಮಾತ್ರವನ್ನು ವಂತಿಕೆಯಾಗಿ ನೀಡಲು ಅವಕಾಶವಿರುವುದರಿಂದ ರೂ.1.00 ಲಕ್ಷವನ್ನು ನೀಡಲು ಬರುವುದಿಲ್ಲವೆಂದು ತಿಳಿಸಿದರು. ಈ ಬಗ್ಗೆ ಸಭೆಯಲ್ಲಿ ಚರ್ಚಿಸುತ್ತಾ, ದಸರಾ ಹಬ್ಬಕ್ಕೆ ವಂತಿಕೆಯಾಗಿ ರೂ.1.00 ಲಕ್ಷ ಹಣವನ್ನು ನೀಡುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ, ಸರ್ಕಾರದ ಆದೇಶದಂತೆ ಕ್ರಮ ಕೈಗೊಳ್ಳಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>2. ಪ್ರಾಧಿಕಾರದ ಕಚೇರಿ ಉಪಯೋಗಕ್ಕೆ ಒಂದು ಪಿಪಿಟಿ (powerpoint presentation)ಗೆ ಇರುವ ಉಪಕರಣಗಳನ್ನು ಖರೀದಿಸುವ ಬಗ್ಗೆ.</u>**

**<u>ನಿರ್ಣಯ:–</u>**ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿ ಉಪಯೋಗಕ್ಕೆ ಅತ್ಯಾವಶ್ಯಕವಾಗಿರುವ ಪಿಪಿಟಿ (powerpoint presentation)ಗಾಗಿ ಬಳಸುವ ಉಪಕರಣಗಳನ್ನು ಸರ್ಕಾರದ ಅನುಮೋದನೆಯೊಂದಿಗೆ ಖರೀದಿಸಲು ಸಭೆಯಲ್ಲಿ ಪ್ರಾಧಿಕಾರದ ಅಧ್ಯಕ್ಷರು ಸೂಚನೆ ನೀಡಿದರು. ಇದಕ್ಕೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/–

(ಅಭಿರಾಂ ಜಿ.ಶಂಕರ್ (ಭಾ.ಆ.ಸೇ),
ಉಪವಿಭಾಗಾಧಿಕಾರಿಗಳು, ಮಡಿಕೇರಿ ಉಪ ವಿಭಾಗ,
ಮತ್ತು ಅಪರ ಜಿಲ್ಲಾಧಿಕಾರಿಗಳು(ಪ್ರ),
ಹಾಗೂ ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ,
ಮಡಿಕೇರಿ.

ಸಹಿ/–

(ಶ್ರೀ ಅಶೋಕ್ ಕುಮಾರ್)
ಆಯುಕ್ತರು(ಪ್ರ),
ನಗರಾಭಿವೃದ್ಧಿ ಪ್ರಾಧಿಕಾರ,
ಮಡಿಕೇರಿ.

**"ನಕಲು"**
**ಸಹಿ/–**
**ಆಯುಕ್ತರು(ಪ್ರ),**
**ನಗರಾಭಿವೃದ್ಧಿ ಪ್ರಾಧಿಕಾರ,**
**ಮಡಿಕೇರಿ.**